**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಸ./2017–18/662-18

ದಿನಾಂಕ: 19.03.2018

ಮಾನ್ಯರೇ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ನಲವತ್ತೈದನೆಯ** ಸಭೆಯು ದಿನಾಂಕ: **16.03.2018**ರ **ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ** ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

Sd/-
ಕುಲಸಚಿವರು
**ಕುಲಸಚಿವರು**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಬೆಂಗಳೂರು – 560 018**

ಇವರಿಗೆ,

1. **ಶ್ರೀಮತಿ ಸುಜಾತ ಗೌಡ,** # 30, 7ನೇ ಹಂತ, 2ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, ಮೈಲಸಂದ್ರ, ಕೆಂಗೇರಿ, ಬೆಂಗಳೂರು – 560059.
2. **ಶ್ರೀ ಶಿವಕುಮಾರ್ ಎನ್.,** # 109, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಪಾಂಡುರಂಗ ಬಡಾವಣೆ, ಅರಕೆರೆ ಗೇಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560076.
3. **ಡಾ. ಕೆ. ಸುಧಾಕರ್,** ನಂ. 346/347, 'ಪ್ರೇಮವಿಲ್ಲಾ', 14ನೇ ಮುಖ್ಯರಸ್ತೆ, ಆರ್.ಎಂ.ವಿ. ಬಡಾವಣೆ, ಸದಾಶಿವನಗರ, ಬೆಂಗಳೂರು–80.
4. **ಕ್ಯಾಪ್ಟನ್ ಗಣೇಶ್ ಕಾರ್ಣಿಕ್,** ರೂಮ್ ನಂ. 145, 1ನೇ ಮಹಡಿ, ವಿಧಾನಸೌಧ, ಬೆಂಗಳೂರು–560001.
5. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು–560001
6. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು–560001
7. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001
8. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು–09,
9. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
10. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
11. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001
12. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು–560001
13. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012
14. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009
15. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

ಪ್ರತಿಗಳು:

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷತಾ ಪ್ರತಿ

ದೂರವಾಣಿ: 080 – 26701303 / 26705387; ಇ–ಮೇಲ್: karnatakasanskrituniversity@gmail.com
दूरवाणी: ०८०–२६७०१३०३; २६७०५३८७; ई–संङ्केतः – karnatakasanskrituniversity@gmail.com

## 16.03.2018ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 45ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 45ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಮಾರ್ಚ್ 16, 2018ರ ಶುಕ್ರವಾರ ಪೂರ್ವಾಹ್ನ 11.00** ಗಂಟೆಗೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀಮತಿ ಸುಜಾತ ಗೌಡ**, ಬೆಂಗಳೂರು | ಸದಸ್ಯರು |
| ೩. | **ಶ್ರೀ ಶಿವಕುಮಾರ್ ಎನ್.**, ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು – ಪರವಾಗಿ **ಶ್ರೀಮತಿ ಮಂಜುಳಾ ಸಿ.ಎನ್.**, ಸಹಾಯಕ ನಿರ್ದೇಶಕರು | ಸದಸ್ಯರು |
| ೫. | **ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 – ಪರವಾಗಿ **ಶ್ರೀಮತಿ ಜಾಹ್ನವಿ**, ಹಿರಿಯ ಸಹಾಯಕ ನಿರ್ದೇಶಕರು | ಸದಸ್ಯರು |
| ೬. | **ಶ್ರೀಮತಿ ಎಂ. ಶಿಲ್ಪ**, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | **ಡಾ. ಕೆ. ಸುಧಾಕರ್**, ಶಾಸಕರು(ಚಿಕ್ಕಬಳ್ಳಾಪುರ), ಬೆಂಗಳೂರು | ಸದಸ್ಯರು |
| ೨. | **ಕ್ಯಾಪ್ಟನ್ ಗಣೇಶ್ ಕಾರ್ಣಿಕ್**, ಮಾನ್ಯ ವಿಧಾನಪರಿಷತ್ ಸದಸ್ಯರು, ಬೆಂಗಳೂರು | ಸದಸ್ಯರು |
| ೩. | **ಪ್ರಧಾನ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೭. | **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೯. | **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೧೦. | **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೧೧. | **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ, ಟಿಪ್ಪಣಿ ಮತ್ತು ನಿರ್ಣಯ | |
|---|---|---|
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಪ್ರಶಾಸನ ಸಮಿತಿ 43ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 43ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 03.02.2018ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಪ್ರಶಾಸನ ಸಮಿತಿ 43ನೇ ಸಭೆಯ ಅನುಪಾಲನಾ ವರದಿಯನ್ನು ಪರಿಶೀಲಿಸಿ, ಒಪ್ಪಿಗೆಯನ್ನು ನೀಡಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸಿದ 2017–18ನೇ ಸಾಲಿನ ವಲಯಮಟ್ಟ ಮತ್ತು ರಾಜ್ಯಮಟ್ಟದ ಸ್ಪರ್ಧೆಗಳ ಒಟ್ಟು ವೆಚ್ಚಕ್ಕೆ ಅನುಮತಿ ನೀಡುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ರಾಜ್ಯದ ಸಂಸ್ಕೃತ ಪಾಠಶಾಲೆಗಳಲ್ಲಿ 2017–18ನೇ ಸಾಲಿನಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ವಲಯಮಟ್ಟದ ಸ್ಪರ್ಧೆಗಳನ್ನು ಹಾಗೂ |

| | | |
|---|---|---|
| | | ವಲಯಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಿತು. ಈ ಸ್ಪರ್ಧೆಗಳನ್ನು ನಡೆಸಲು 3,50,000/- ರೂಪಾಯಿಗಳ ಅಂದಾಜು ವೆಚ್ಚಕ್ಕೆ ದಿನಾಂಕ: 27.10.2017ರಂದು ನಡೆದ ಪ್ರಶಾಸನ ಸಮಿತಿ 40ನೇ ಸಭೆಯ ಅನುಮೋದನೆಯನ್ನು ಪಡೆಯಲಾಗಿತ್ತು. ವಲಯ ಹಾಗೂ ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಲು ಒಟ್ಟಾರೆಯಾಗಿ ರೂ. 1,98,975/- (ಒಂದು ಲಕ್ಷದ ತೊಂಭತ್ತೆಂಟು ಸಾವಿರದ ಒಂಭೈನೂರ ಎಪ್ಪತ್ತೈದು ರೂಪಾಯಿ ಮಾತ್ರ) ಖರ್ಚಾಗಿದ್ದು, ಉಳಿಕೆ ಹಣವನ್ನು ವಾಪಾಸು ಮಾಡಲಾಗಿದೆ. ಆದ್ದರಿಂದ ಕಡತ ಮುಕ್ತಾಯಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. 2017-18ನೇ ಸಾಲಿನ ವಲಯಮಟ್ಟ ಹಾಗೂ ರಾಜ್ಯಮಟ್ಟದ ಸ್ಪರ್ಧೆಗಳಿಗೆ ತಗುಲಿದ ಒಟ್ಟು ವೆಚ್ಚ ರೂ. 1,98,975/-ಗಳಿಗೆ ಸಭೆಯು ಅನುಮೋದನೆಯನ್ನು ನೀಡಿತು.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **ಆರನೇ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ತಗುಲಿದ ವೆಚ್ಚಕ್ಕೆ ಅನುಮೋದನೆ ನೀಡುವ ಬಗೆಗೆ.**<br>ಘನತೆವೆತ್ತ ಕುಲಾಧಿಪತಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆರನೇ ದೀಕ್ಷಾಂತ ಘಟಿಕೋತ್ಸವ ಸಮಾರಂಭವು ದಿನಾಂಕ: 20.02.2018ರಂದು ಬೆಂಗಳೂರಿನ ಕಿಮ್ಸ್ ಆವರಣದಲ್ಲಿರುವ 'ಕುವೆಂಪು ಕಲಾಕ್ಷೇತ್ರ'ದಲ್ಲಿ ಯಶಸ್ವಿಯಾಗಿ ನಡೆಯಿತು. ಈ ಘಟಿಕೋತ್ಸವದಲ್ಲಿ 2015-16 ಹಾಗೂ 2016-17ನೇ ಸಾಲಿನಲ್ಲಿ ಉತ್ತೀರ್ಣರಾದ ಬಿ.ಎ.-ವಿದ್ವನ್ಮಧ್ಯಮಾ, ಎಂ.ಎ.-ವಿದ್ವದುತ್ತಮಾ, ಎಂ.ಫಿಲ್-ವಿಶಿಷ್ಟಾಚಾರ್ಯ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ನೀಡಲಾಯಿತು. ವಿವಿಧ ಸಂಸ್ಥೆಗಳು ಸ್ಥಾಪಿಸಿರುವ ದತ್ತಿನಿಧಿ ಸ್ವರ್ಣಪದಕಗಳನ್ನು ಹಾಗೂ ಇನ್‌ಫೋಸಿಸ್ ಫೌಂಡೇಶನ್ ಸಂಸ್ಥೆಯು ಸ್ಥಾಪಿಸಿರುವ ದತ್ತಿನಿಧಿ 'ನಗದು ಪುರಸ್ಕಾರ'ವನ್ನು ವಿತರಿಸಲಾಯಿತು. ಸಂಶೋಧನ ಪ್ರಬಂಧ ಸಲ್ಲಿಸಿದ ಒಬ್ಬರು ಅಭ್ಯರ್ಥಿಗೆ ಡಿ.ಲಿಟ್ ಉಪಾಧಿಯನ್ನು ಹಾಗೂ ಘನತೆವೆತ್ತ ರಾಜ್ಯಪಾಲರು ಅನುಮತಿ ನೀಡಿದ ಒಬ್ಬರು ಹಿರಿಯ ವಿದ್ವಾಂಸರಿಗೆ ಗೌರವ ಡಿ.ಲಿಟ್ ಉಪಾಧಿಯನ್ನು ನೀಡಲಾಯಿತು. ಆರನೇ ದೀಕ್ಷಾಂತ ಘಟಿಕೋತ್ಸವ ಸಮಾರಂಭವನ್ನು ನಡೆಸಲು 6,00,000/- ರೂಪಾಯಿಗಳ ಅಂದಾಜು ಮೊತ್ತಕ್ಕೆ ದಿನಾಂಕ: 27.10.2017ರಂದು ನಡೆದ ಪ್ರಶಾಸನ ಸಮಿತಿ 40ನೇ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿತ್ತು. ಸಮಾರಂಭಕ್ಕೆ ಮಾಡಲಾದ ವೆಚ್ಚಗಳ ಪಟ್ಟಿಯನ್ನು ಸಭೆಗೆ ಮಂಡಿಸಲಾಗುವುದು. ಆರನೇ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ತಗುಲಿದ ಒಟ್ಟು ವೆಚ್ಚಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. ವಿಶ್ವವಿದ್ಯಾಲಯದ ಆರನೆಯ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ತಗುಲಿದ ಒಟ್ಟು ವೆಚ್ಚ ರೂ. 3,47,584/-ಗಳಿಗೆ ಸಭೆಯು ಅನುಮೋದನೆಯನ್ನು ನೀಡಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಯುಜಿಸಿ ವೇತನಶ್ರೇಣಿಯ ಬೋಧಕೇತರ - ಸಹಾಯಕ ಗ್ರಂಥಪಾಲಕ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**<br>ದಿನಾಂಕ: 16.03.2016ರಂದು ನಡೆದ ಪ್ರಶಾಸನ ಸಮಿತಿ 32ನೇ ಸಭೆಯ ನಿರ್ಣಯದಂತೆ ಯುಜಿಸಿ ವೇತನಶ್ರೇಣಿಯ ಬೋಧಕ-ಬೋಧಕೇತರ ಹುದ್ದೆಗಳ ನೇಮಕಾತಿಗಾಗಿ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಬೋಧಕ-ಬೋಧಕೇತರ ಹುದ್ದೆಗಳ ನೇಮಕಾತಿಗೆ ಸುತ್ತೋಲೆ ಸಂಖ್ಯೆ: ಇಡಿ 136 ಯುಎನ್ಇ 2017; ದಿನಾಂಕ: 17.07.2017ರ ಮಾರ್ಗಸೂಚಿ ಹಾಗೂ UGC Regulations 2016 ಅನ್ವಯ ಕ್ರಮವಹಿಸಲು ಸರ್ಕಾರವು ಸೂಚಿಸಿದ ಹಿನ್ನಲೆಯಲ್ಲಿ, ಯುಜಿಸಿ ವೇತನಶ್ರೇಣಿಯ ಬೋಧಕ-ಬೋಧಕೇತರ ಹುದ್ದೆಗಳ ನೇಮಕಾತಿಗಾಗಿ ಮರುಅಧಿಸೂಚನೆಯನ್ನು ಹೊರಡಿಸಿ, ದಿನಾಂಕ: 27.10.2017ರಂದು ನಡೆದ ಪ್ರಶಾಸನ ಸಮಿತಿ 40ನೇ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿದೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 136 ಯುಎನ್ಇ 2017; ದಿನಾಂಕ: 17.07.2017ರ ಮಾರ್ಗಸೂಚಿಯನ್ವಯ ಯುಜಿಸಿ ವೇತನಶ್ರೇಣಿಯ ಬೋಧಕೇತರ (ಸಹಾಯಕ ಗ್ರಂಥಪಾಲಕ) ಹುದ್ದೆಗಳ ನೇಮಕಾತಿಗಾಗಿ ದಿನಾಂಕ: 06.03.2018ರಂದು ಲಿಖಿತ ಪರೀಕ್ಷೆಯನ್ನು ನಡೆಸಲಾಗಿದೆ. ಲಿಖಿತ ಪರೀಕ್ಷೆಯ ಮೆರಿಟ್ ಮತ್ತು ಮೀಸಲಾತಿ ನಿಯಮಗಳನ್ವಯ ದಿನಾಂಕ: 15.03.2018 ರಂದು |

ಈ ಹುದ್ದೆಗಳ ನೇಮಕಾತಿಗಾಗಿ 'ಆಯ್ಕೆ ಸಮಿತಿ' ಸಂದರ್ಶನವನ್ನು ನಡೆಸಲಾಯಿತು. 'ಆಯ್ಕೆ ಸಮಿತಿ' ಶಿಫಾರಸ್ಸುಗಳನ್ವಯ ಆಯ್ಕೆಯಾದ ಅಭ್ಯರ್ಥಿಗಳನ್ನು ಸಹಾಯಕ ಗ್ರಂಥಪಾಲಕ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ**

**ಯುಜಿಸಿ ವೇತನಶ್ರೇಣಿಯ ಬೋಧಕೇತರ 'ಸಹಾಯಕ ಗ್ರಂಥಪಾಲಕ' ಹುದ್ದೆಗಳಿಗೆ 2018ರ ಮಾರ್ಚ್ 15ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಮಾನ್ಯ ಕುಲಪತಿಗಳು ಸಭೆಯ ಮುಂದೆ ಮಂಡಿಸಿದರು. ಯೋಜನೆ, ಸಂಶೋಧನೆ ಮತ್ತು ಬೋಧನೆ –ಇವುಗಳಿಗೆ ಅನುಗುಣವಾಗಿ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹೊರಡಿಸಿದ ಅಧಿಸೂಚನೆಗಳ ಅನ್ವಯ ಹಾಗೂ ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆಗೊಂಡ 'Amendments to the existing Statute Governing the Appointment of Professors, Associate Professors, Assistant Professors and Librarians & conduct of Interview of Teaching, Academic Staff & Other Allied posts under section 38(II) of the Karnataka Samskrit University Act, 2009'** (ಸಂಖ್ಯೆ: ಇಡಿ 384 ಯುಎನ್ಇ 2017; ದಿನಾಂಕ: **10.01.2018**)ರಲ್ಲಿರುವ ಎಲ್ಲಾ ನಿಯಮಗಳನ್ನು ಸಭೆಯ ಮುಂದೆ ಮಾನ್ಯ ಕುಲಪತಿಗಳು ಮಂಡಿಸಿದರು. ಪ್ರಶಾಸನ ಸಮಿತಿಯು ಸಂಪೂರ್ಣವಾಗಿ ಎಲ್ಲ ವಿವರಗಳನ್ನು ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಶೈಕ್ಷಣಿಕ ಅರ್ಹತೆ, ಸಂಶೋಧನಾ ಅನುಭವ ಹಾಗೂ ಇತರೆ ಅರ್ಹತೆಗಳನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆ ತನ್ನ ಅನುಮೋದನೆಯನ್ನು ನೀಡಿತು.

| ಕ್ರ.ಸಂ. | ಆಯ್ಕೆಗೊಂಡ ಅಭ್ಯರ್ಥಿಗಳು | ಮೀಸಲಾತಿ |
|---|---|---|
| **01.** | **ರಮೇಶ್ ಎಸ್. ಪುಟ್ಟಣ್ಣನವರ್**<br>S/o. ಶಿವಶಂಕರ್ ಪುಟ್ಟಣ್ಣನವರ್<br>ಬಸವೇಶ್ವರ ದೇವಸ್ಥಾನದ ಹಿಂಭಾಗ, ಕಳಸೂರು ಗ್ರಾ. & ಅಂಚೆ,<br>ಸವಣೂರು ತಾಲ್ಲೂಕು, ಹಾವೇರಿ ಜಿಲ್ಲೆ – 581112 | **ಸಾಮಾನ್ಯ** |
| **02.** | **ಅರುಣ್‌ಕುಮಾರ್ ಹೆಚ್.ಎಸ್.**<br>S/o. ಲೇಟ್ ಹೆಚ್.ಎನ್. ಸುಬ್ಬಯ್ಯ<br>ಎಸ್.ಐ. ಹೊನ್ನಲಗೆರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ – 571422 | **ಪರಿಶಿಷ್ಟ ಜಾತಿ** |

**ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.**

ವಿಷಯ 02

**ವಿಷಯ ಮತ್ತು ಟಿಪ್ಪಣಿ**

**'ಇಲಾಖಾ ಪದೋನ್ನತಿ ಸಮಿತಿ' (Departmental Promotion Committee) ರಚಿಸುವ ಬಗೆಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010, ದಿನಾಂಕ: 25.01.2011ರ ಅನ್ವಯ ಯುಜಿಸಿ ಹಾಗೂ ರಾಜ್ಯ ವೇತನಶ್ರೇಣಿಯ ಒಟ್ಟು 133 ಬೋಧಕ-ಬೋಧಕೇತರ ಹುದ್ದೆಗಳು ಸೃಜನೆಗೊಂಡಿವೆ. ಈ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ವೃಂದ ಮತ್ತು ನೇಮಕಾತಿ ಪರಿನಿಯಮ'ವನ್ನು ರಚಿಸಿಕೊಳ್ಳಲಾಗಿದ್ದು, ಈ ಪರಿನಿಯಮವು ಘನತೆವೆತ್ತ ರಾಜ್ಯಪಾಲರಿಂದ ದಿನಾಂಕ: 14.05.2012ರಂದು ಅನುಮೋದನೆಗೊಂಡಿದೆ.( ಸಂಖ್ಯೆ: ಇಡಿ 213 ಯುಆರ್‌ಸಿ 2011; ದಿನಾಂಕ: 25.05.2012.)

'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ವೃಂದ ಮತ್ತು ನೇಮಕಾತಿ ಪರಿನಿಯಮ'ದ ಅನ್ವಯ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಒಟ್ಟು 133 ಬೋಧಕ-ಬೋಧಕೇತರ ಹುದ್ದೆಗಳ ಪೈಕಿ ರಾಜ್ಯ ವೇತನಶ್ರೇಣಿಯ ಕೆಲವು ಬೋಧಕೇತರ ಹುದ್ದೆಗಳನ್ನು 'ಪದೋನ್ನತಿ' ಮೂಲಕ ಭರ್ತಿ ಮಾಡಿಕೊಳ್ಳಬೇಕಾಗಿದೆ. 'ಕರ್ನಾಟಕ ಸರ್ಕಾರಿ ನೌಕರರು (ಜ್ಯೇಷ್ಠತೆ)(ತಿದ್ದುಪಡಿ) ನಿಯಮಗಳು 2006' ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: 2368/2011ರ ತೀರ್ಪಿನನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗಳ ಜ್ಯೇಷ್ಠತಾಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ, ನಿಯಮಾನುಸಾರ ಮುಂದಿನ ಕ್ರಮಗಳನ್ನು ಕೈಗೊಳ್ಳಲು 'ಇಲಾಖಾ ಪದೋನ್ನತಿ ಸಮಿತಿ' (Departmental Promotion Committee)ಯನ್ನು ರಚಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

| | | |
|---|---|---|
| | ನಿರ್ಣಯ | ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿತು. ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಬೇಕಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ತಜ್ಞರನ್ನು ಒಳಗೊಂಡ 'ಇಲಾಖಾ ಪದೋನ್ನತಿ ಸಮಿತಿ'ಯನ್ನು ರಚಿಸಲು ಸಭೆಯು ಅನುಮೋದನೆಯನ್ನು ನೀಡಿತು.<br>1. ಶ್ರೀ ಯು.ಬಿ. ಉಳವಿ, ನಿವೃತ್ತ ಉಪಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ – ಅಧ್ಯಕ್ಷರು<br>2. ಶ್ರೀ ದೇವರಾಜು, ನಿವೃತ್ತ ಉಪಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ – ಸದಸ್ಯರು<br>3. ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಸದಸ್ಯರು<br>4. ಶ್ರೀ ವೆಂಕಟೇಶ ವಿ., ಸಹಾಯಕ ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಸದಸ್ಯ ಸಂಚಾಲಕರು<br>'ಇಲಾಖಾ ಪದೋನ್ನತಿ ಸಮಿತಿ'ಯು ನೀಡುವ ಶಿಫಾರಸ್ಸಿನ ಅನ್ವಯ ನಿಯಮಾನುಸಾರ ಅರ್ಹ ನೌಕರರಿಗೆ ಪದೋನ್ನತಿ ಯನ್ನು ನೀಡುವುದಕ್ಕೆ ಪ್ರಶಾಸನ ಸಮಿತಿಯು ಒಪ್ಪಿಗೆಯನ್ನು ನೀಡಿತು. |
| ವಿಷಯ 03 | | **ಶ್ರೀಮತಿ ಸಾವಿತ್ರಿ ಎಂ. ಯರಗಟ್ಟಿ, ಸಹಾಯಕ ಪ್ರಾಧ್ಯಾಪಕರು, ಸಿ.ಎಲ್.ವೈ. ಸಂಸ್ಕೃತ ಕಾಲೇಜು, ಧಾರವಾಡ –ಇವರು ಅಮೆರಿಕಾ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗೆಗೆ.** |
| | ವಿಷಯ ಮತ್ತು ಟಿಪ್ಪಣಿ | ಶ್ರೀಮತಿ ಸಾವಿತ್ರಿ ಎಂ. ಯರಗಟ್ಟಿ, ಸಹಾಯಕ ಪ್ರಾಧ್ಯಾಪಕರು, ವ್ಯಾಕರಣಶಾಸ್ತ್ರ, ಸಿ.ಎಲ್.ವೈ. ಸಂಸ್ಕೃತ ಕಾಲೇಜು, ಧಾರವಾಡ –ಇವರು ವಿದೇಶದಲ್ಲಿರುವ ತಮ್ಮ ಮಗನನ್ನು ಭೇಟಿ ಮಾಡಲು ಬೇಸಿಗೆ ರಜೆ ಅವಧಿ (ದಿನಾಂಕ: 20.04.2018ರಿಂದ) ಮತ್ತು ವೇತನರಹಿತ ರಜೆ(ದಿನಾಂಕ: 01.06.2018ರಿಂದ 31.07.2018)ಯನ್ನು ಪಡೆದು, ಅಮೆರಿಕಾ ಪ್ರವಾಸ ಮಾಡಲು ಅನುಮತಿ ನೀಡುವಂತೆ ಮನವಿ ಮಾಡಿರುತ್ತಾರೆ. ಇವರಿಗೆ ದಿನಾಂಕ: 01.06.2018ರಿಂದ 31.07.2018ರ ವರೆಗೆ ವೇತನರಹಿತ ರಜೆಯನ್ನು ಮಂಜೂರು ಮಾಡಲು ಹಾಗೂ ಅಮೆರಿಕಾ ಪ್ರವಾಸ ಕೈಗೊಳ್ಳಲು ಅನುಮತಿ ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಶ್ರೀಮತಿ ಸಾವಿತ್ರಿ ಎಂ. ಯರಗಟ್ಟಿ ಅವರು ಅಮೆರಿಕಾ ಪ್ರವಾಸ ಮಾಡಲು ಹಾಗೂ ಅವರಿಗೆ ದಿನಾಂಕ: 01.06.2018ರಿಂದ 31.07.2018ರ ವರೆಗೆ ವೇತನರಹಿತ ರಜೆ ನೀಡಲು ಸಭೆಯು ಒಪ್ಪಿಗೆಯನ್ನು ನೀಡಿತು.** |

Shilpa

ಶ್ರೀಮತಿ ಎಂ. ಶಿಲ್ಪ, ಕೆ.ಎ.ಎಸ್.
ಸದಸ್ಯ ಕಾರ್ಯದರ್ಶಿ

ಪ್ರೊ. ಪದ್ಮಾಶೇಖರ್
ಅಧ್ಯಕ್ಷರು